ಶ್ರೀ ಕರಿಯಣ್ಣ (ಹೊಳಹೊನ್ನೂರು): ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕ್ರೀಡಾಂಗಣಗಳನ್ನು ನಿರ್ಮಿಸಲು ಅನುಸರಿಸಬೇಕಾದ ನಿಯಮಗಳಾವುವು?

ಆ) ದೊಡ್ಡ ಹೋಬಳಿ ಕೇಂದ್ರಗಳಲ್ಲಿ (ಗ್ರಾಮಾಂತರ) ಕ್ರೀಡಾಂಗಣಗಳನ್ನು ಸರ್ಕಾರ ನಿರ್ಮಿಸುವುದೇ?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಯುವಜನ ಸೇವೆ ಹಾಗೂ ಕ್ರೀಡಾ ರಾಜ್ಯ ಸಚಿವರು):

ಕ್ರೀಡಾಂಗಣಗಳನ್ನು ನಿರ್ಮಿಸಲು ಕನಿಷ್ಠ 8 ಎಕರೆ ಜಮೀನಿನ ಅವಶ್ಯಕತೆ ಇರುತ್ತದೆ. ಸದರಿ ಜಮೀನು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರಿಸಬೇಕಾಗುತ್ತದೆ. ಆಯವ್ಯಯದಲ್ಲಿ ಸದರಿ ಉದ್ದೇಶಕ್ಕಾಗಿ ಸೂಕ್ತ ಅನುದಾನ ಒದಗಿಸಿರ ಬೇಕು. ತಾಲ್ಲೂಕು ಕ್ರೀಡಾಂಗಣ ನಿರ್ಮಿಸಲು ಅಂದಾಜು ರೂ.30.00 ಲಕ್ಷಗಳಿಂದ ರೂ.40.00 ಲಕ್ಷಗಳು ವೆಚ್ಚವಾಗುತ್ತದೆ. ಜಿಲ್ಲಾ ಪಂಚಾಯತ್‌ನಿಂದ ರೂ.10.00 ಲಕ್ಷಗಳನ್ನು ಮಂಜೂರು ಮಾಡಲು ಅವಕಾಶವಿದ್ದು ಉಳಿದ ಸುಮಾರು 2:3ರಷ್ಟು ಭಾಗದ ವೆಚ್ಚವನ್ನು ಕೇಂದ್ರ ಸರ್ಕಾರದ ಅನುದಾನ ಮತ್ತು ಸಾರ್ವಜನಿಕ ವಂತಿಕೆ ಮೂಲಕ ಭರಿಸಬಹುದಾಗಿರುತ್ತದೆ. ಕ್ರೀಡಾಂಗಣ ನಿರ್ಮಿಸಲು ಪ್ರಸ್ತಾವನೆಯನ್ನು ಇಲಾಖೆಯ ಅಧಿಕಾರಿಗಳು, ಆಯುಕ್ತರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಇವರಿಗೆ ಸಲ್ಲಿಸಿ ಸರ್ಕಾರದ ಆಡಳಿತಾತ್ಮಕ ಅನುಮೋದನೆ ಪಡೆದ ನಂತರ ಮತ್ತು ಅನುದಾನ ಬಿಡುಗಡೆ ಮಾಡಿದ ನಂತರ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು.

ಕ್ರೀಡಾಂಗಣವನ್ನು ನಿರ್ಮಿಸಲು ಜಮೀನಿನ ಹಕ್ಕು ಪತ್ರಗಳಿರಬೇಕು. ಕ್ರೀಡಾಂಗಣದ ನಿವೇಶನ ಸ್ಥಳೀಯ ಜನರಿಗೆ ಅನುಕೂಲವಾಗುವಂತಿರಬೇಕು. ಅಂದಾಜು ವೆಚ್ಚ ಮತ್ತು ನೀಲಿ ನಕಾಶೆಗಳನ್ನು ಸಿದ್ದಪಡಿಸಿ ಸರ್ಕಾರದ ಆಡಳಿತಾತ್ಮಕ ಅನುಮೋದನೆ ಪಡೆದಿರಬೇಕು. ನಿರ್ಮಾಣ ಕಾಮಗಾರಿಯನ್ನು ಸರ್ಕಾರವು ಗುರುತಿಸಿ ಅನುಮೋದಿಸಿದ ಸಂಸ್ಥೆಗೆ ವಹಿಸಿಕೊಡಬೇಕು.

ಆ) ಸರ್ಕಾರ ಸದ್ಯಕ್ಕೆ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ತಾಲ್ಲೂಕು ಮಟ್ಟದ ಕ್ರೀಡಾಂಗಣಗಳನ್ನು ನಿರ್ಮಿಸುವ ಯೋಜನೆ ಕೈಗೆತ್ತಿಕೊಂಡಿದ್ದು, ಈ ಯೋಜನೆ ಪೂರ್ಣಗೊಂಡ ನಂತರ ದೊಡ್ಡ ಹೋಬಳಿ ಕೇಂದ್ರಗಳಲ್ಲಿ ಕ್ರೀಡಾಂಗಣ ನಿರ್ಮಿಸುವ ಬಗ್ಗೆ ಪರಿಶೀಲಿಸಲಾಗುವುದು.

ಮಲೆನಾಡು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಬಾರ್ಡ್ ಸಾಲ

49(368)

ಶ್ರೀ ಕರಿಯಣ್ಣ(ಹೊಳೆ ಹೊನ್ನೂರು): ಮಾನ್ಯ ಮೀನುಗಾರಿಕೆ, ಬಂದರು ಹಾಗೂ ಪ್ರದೇಶಾಭಿವೃದ್ಧಿ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲೆನಾಡು ಅಭಿವೃದ್ಧಿ ಮಂಡಳಿಯಲ್ಲಿ ಇದುವರೆಗೆ ನಬಾರ್ಡ್‌ನಲ್ಲಿ ಸಾಲ ಪಡೆದು ಎಷ್ಟು ಕಿ.ಮೀ. ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ.

ಆ) 2000-2001ನೇ ಸಾಲಿಗೆ ಎಷ್ಟು ಕಿ.ಮಿ. ರಸ್ತೆಗಳನ್ನು ಮಲೆನಾಡು ಅಭಿವೃದ್ಧಿ ಮಂಡಳಿಯು ನಬಾರ್ಡ್‌ನಿಂದ ಸಾಲ ಪಡೆದು ರಸ್ತೆ ಮಾಡಲು ಯೋಜನೆ ತಯಾರು ಮಾಡಲಾಗಿದೆ? (ಜಿಲ್ಲಾವಾರು ಅಥವಾ ಕ್ಷೇತ್ರವಾರು ವಿವರ ತಿಳಿಸುವುದು):

ಶ್ರೀ ಬಿ.ರಮಾನಾಥ್ ರೈ (ಮೀನುಗಾರಿಕೆ, ಬಂದರು ಹಾಗೂ ಪ್ರದೇಶಾಭಿವೃದ್ಧಿ ಸಚಿವರು):

ಅ) 54.48 ಕಿ.ಮಿ.

ಆ) 369.25 ಕಿ.ಮಿ. ವಿವರ ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ:

(ಆರ್. ಐ. ಡಿ. ಎಫ್. 5ರಡಿಯಲ್ಲಿ)

ಕ್ರ.ಸಂ.	ಜಿಲ್ಲೆ	ಪ್ರಸ್ತಾಪಿಸಿರುವ ಕಿ.ಮಿ.
1)	ಬೆಳಗಾಂ	37.70
2)	ಚಿಕ್ಕಮಂಗಳೂರು	27.00
3)	ಮಂಗಳೂರು	42.20
4)	ಉಡುಪಿ	22.00
5)	ಧಾರವಾಡ	19.30
6)	ಹಾವೇರಿ	20.50
7)	ಹಾಸನ	50.60
8)	ಕೊಡಗು	30.60
9)	ಮೈಸೂರು	14.50
10)	ಚಾಮರಾಜನಗರ	29.50
11)	ಶಿವಮೊಗ್ಗ	44.10
12)	ದಾವಣಗೆರೆ	19.75
13)	ಕಾರವಾರ (ಉ.ಕ.)	11.50
	ಒಟ್ಟು	369.25